**ಸಿಂಧಿ ಮೂಲ: ಸತೀಶ್ ರೋಹರಾ**
**ಕನ್ನಡಕ್ಕೆ: ಡಿ.ಎನ್. ಶ್ರೀನಾಥ್**

ಕಲೆ: ಮುರಳೀಧರ ರಾಠೋಡ್

# ಏರ್‌ಪೋರ್ಟ್ ಮಾರ್ಗದಲ್ಲಿ



ಆಟೊ ರಿಕ್ಷಾ ಸರಿಯಾದ ಮಾರ್ಗದಲ್ಲಿ ಸಾಗುತ್ತಿಲ್ಲವೆಂಬುದು ಅವನಿಗೆ ಅಕಸ್ಮಾತ್ ಅರಿವಾಯಿತು. ತನಗೆ ಹೀಗೇಕೆ ಅನ್ನಿಸಿತೆಂದು ಕಾರಣ ತಿಳಿಯದಾಯಿತು. ರೈಲಿನಲ್ಲಿ ಒಬ್ಬ ಪ್ರಯಾಣಿಕ ಅವನಿಗೆ, ಏರ್‌ಪೋರ್ಟಿನಿಂದ ಬರುವಾಗ ತನ್ನನ್ನು ಒಬ್ಬ ಟ್ಯಾಕ್ಸಿ ಚಾಲಕ ತಪ್ಪು ಮಾರ್ಗದಲ್ಲಿ ಹೇಗೆ ಅಲೆದಾಡಿಸಿದ್ದ, ಆಗ ತಾನು ಒಂದು ಮಾರ್ಗವನ್ನು ಗುರುತಿಸಿ ಟ್ಯಾಕ್ಸಿಯನ್ನು ನಿಲ್ಲಿಸಿ ಇಳಿದಿದ್ದೆ ಎಂದು ಹೇಳಿದ್ದ.

ಅವನು ದಿಲ್ಲಿಗೆ ಹೋಗಲು ಅನೇಕ ಬಾರಿ ಅಹಮದಾಬಾದ್ ನಿಲ್ದಾಣದಿಂದ ಆಟೊ ರಿಕ್ಷಾದಲ್ಲಿ ಏರ್‌ಪೋರ್ಟಿಗೆ ಹೋಗಿದ್ದಾನೆ. ಆದರೆ ಈಗ ಆಟೊ ರಿಕ್ಷಾ ಸರಿಯಾದ ಮಾರ್ಗದಲ್ಲಿ ಹೋಗುತ್ತಿದೆ ಎಂದು ತಿಳಿಯಲು ಅವನಿಗೆ ಮಾರ್ಗದಲ್ಲಿ ಯಾವ ಗುರುತು ಸಹ ನೆನಪಿಲ್ಲ.

ಅವನಿಗೆ ತನ್ನ ಬಗ್ಗೆಯೇ ಸ್ವಲ್ಪ ಸಿಟ್ಟು ಬಂದಿತು. ಅದೇ ಮಾರ್ಗದಿಂದ ಅನೇಕ ಬಾರಿ ಹಾದು ಹೋದರೂ ಸಹ ಮಾರ್ಗದಲ್ಲಿನ ಯಾವ ಗುರುತು ಸಹ ನೆನಪಿಲ್ಲ ಎಂಬ ಬಗ್ಗೆ ಸ್ವಲ್ಪ ವ್ಯಗ್ರತೆಯೂ ಕಾಡಿತು. ತಾನು ವೃದ್ಧನಾಗಿರುವೆನೆ? ತನ್ನ ನೆನಪಿನ ಶಕ್ತಿ ಕುಂದುತ್ತಿದೆಯೇ? ಎಂದು ತನ್ನನ್ನು ತಾನೇ ಕೇಳಿಕೊಂಡ. ತನ್ನ ಪರೀಕ್ಷಾಸಾಮರ್ಥ್ಯ ಮತ್ತು ನೆನಪಿನ ಶಕ್ತಿಯನ್ನು ನೋಡಿ ಅವನ ಮಿತ್ರರಿಗೂ ಆಶ್ಚರ್ಯವಾಗುತ್ತಿತ್ತು. ತನ್ನನ್ನು ಒಮ್ಮೆ ಭೇಟಿಯಾದ ವ್ಯಕ್ತಿಯನ್ನು ವರ್ಷಗಳಾದರೂ ಸಹ ಹೆಸರಿನೊಂದಿಗೆ ನೆನಪಿಟ್ಟುಕೊಳ್ಳುತ್ತಿದ್ದ. ಪುಸ್ತಕಗಳ ಬಗ್ಗೆ